**ಅಸಲು ದಾವಾ ನಂಃ 36 /2016**
**ಪಿ.ಡಬ್ಲ್ಯೂಃ1 , ಸುನೀಲ**

ದಿನಾಂಕ :**03.06.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟಿ ಸವಾಲು :- ಶ್ರೀ **SAK** ವಕೀಲರಿಂದ

ಈ ದಾವೆ ಹಾಕಿದಾಗ ನನ್ನ ವಯಸ್ಸು 35 ಇತ್ತು. ಆದರೆ ನನ್ನ ವಯಸ್ಸು 45 ಇತ್ತು ಎಂದು ಸೂಚಿಸಿದಕ್ಕೆ ಹೌದು ಎಂದು ಹೇಳುತ್ತಾರೆ. ನನಗೆ ಕನ್ನಡ ಇಂಗ್ಲೀಷ ಓದಲು ಮತ್ತು ಬರೆಯಲು ಬರುತ್ತದೆ. ನಾನು ಬಿ ಎ ಪದವಿಧರ ನಾಗಿರುತ್ತೇನೆ. ದಾವಾ ಸ್ವತ್ತು 1975 ರಿಂದ 2007 ರ ವರೆಗೆ ನನ್ನ ತಂದೆ ಹೆಸರಿನಲ್ಲಿ ಇತ್ತು. ಹುಸೇನಸಾಬ ತಂದೆ ಇಬ್ರಾಹಿಂಸಾಬ ಯಡ್ರಾಮಿ ಇವರಿಂದ ನನ್ನ ತಂದೆ 10 ಸಾವಿರ ರೂಪಾಯಿಗೆ ಖರೀದಿ ಮಾಡಿರುತ್ತಾರೆ. ದಾವಾ ಸ್ವತ್ತಿಗೆ ಕಂದಾಯವನ್ನು ನನ್ನ ತಂದೆಯವರು ಕಟ್ಟುತ್ತಿದ್ದರು. ಅವರು 1975 ರಿಂದ 1989 ವರೆಗೆ ಕಂದಾಯ ಕಟ್ಟಿರುತ್ತಾರೆ. ಅವರು ಮರಣ ಹೊಂದಿದ ನಂತರ ನಾವೇ ಕಟ್ಟಿರುತ್ತೇವೆ. ನಾವು ನಮ್ಮ ಭಾಗದ ಸ್ವತ್ತಿಗೆ ಮಾತ್ರ ಕಂದಾಯ ಕಟ್ಟಿಲ್ಲ ಪೂರ್ತಿ ಸ್ವತ್ತಿಗೆ ಕಂದಾಯ ಕಟ್ಟಿರುತ್ತೇವೆ ನಾನು ಕಂದಾಯ ರಶಿದಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತನ್ನು ಪ್ರತಿವಾದಿಗಳು ಮತ್ತು ನನ್ನ ತಂದೆ ಎಲ್ಲರೂ ಜಂಟಿಯಾಗಿ ಖರೀದಿ ಮಾಡಿದ್ದು ನನ್ನ ತಂದೆ ದೊಡ್ಡವರಾಗಿದ್ದರಿಂದ ಅವರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಇಲ್ಲಾ ಸುಳ್ಳು ಎಂದು ಹೇಳುತ್ತಾರೆ.

ನಮ್ಮ ತಾಯಿಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ, ಆದರೆ ಮರಾಠಿ ಬರುತ್ತದೆ. ಅವರು ಸಹಿಯನ್ನು ಮರಾಠಿ ಭಾಷೆಯಿಲ್ಲಿ ಮಾಡುತ್ತಿದ್ದರು. ನಮ್ಮ ತಾಯಿ ನನ್ನ ಜೊತೆಯಲ್ಲಿ ಇರುತ್ತಾರೆ ಅಂದರೆ ಸರಿ. ಅವರು ನಮ್ಮ ಜೊತೆ ಆರೋಗ್ಯದಿಂದ ಇದ್ದಾರೆ ಅವರಿಗೆ ನಡೆದಾಡಲು ಓಡಾಡಲು ಬರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಗೆ ವಾದ ಪತ್ರದಲ್ಲಿ ಅವರ ತಾಯಿಯ ಸಹಿಯನ್ನು ತೋರಿಸಿದಾಗ ಅದು ನಮ್ಮ ತಾಯಿಯ ಸಹಿಯಂತೆ ಕಾಣುತ್ತದೆ ಎಂದು ಹೇಳುತ್ತಾರೆ. ಅದೇ ರೀತಿ ವಕಾಲತನಲ್ಲಿ ಸಹಿಯನ್ನು ತೋರಿಸಲಾಗಿ ಅದು ನಮ್ಮ ತಾಯಿಯ ಸಹಿ ಎಂದು ಗುರುತಿಸಿರುತ್ತಾರೆ. ನಿಪಿ-21 ರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು, ಅದು ನಮ್ಮ ತಾಯಿಯ ಸಹಿ ಎಂದು ಗುರುತಿಸಿರುತ್ತಾರೆ. ವಕಲಾತನ್ನು ನಿಪಿ-48 ಎಂದು, ಒಪ್ಪಿದ ಸಹಿಯನ್ನು ನಿಪಿ-48(ಎ) ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ-21 ರಲ್ಲಿರುವ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-22 ರಲ್ಲಿ ಸಹಿಯನ್ನು ತೋರಿಸಲಾಗಿ ಅದು ಸಹ ನಮ್ಮ ತಾಯಿ ಸಹಿ ಎಂದು ಗುರುತಿಸಿದ್ದು ಅದನ್ನು

**ಅಸಲು ದಾವಾ ನಂಃ 36 /2016**
**ಪಿ.ಡಬ್ಲ್ಯೂಃ1 , ಸುನೀಲ**

ನಿಪಿ-22(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ನಿಪಿ-30 ನಕಾಶೆ ತೋರಿಸಲಾಗಿ ಅದರಲ್ಲಿರುವ ಸಹಿ ತನ್ನ ತಾಯಿಯ ಸಹಿ ಅಲ್ಲಾ ಎಂದು ಹೇಳುತ್ತಾರೆ.

ದಾವಾ ಸ್ವತ್ತಿನಲ್ಲಿ ನಮ್ಮ ತಂದೆಯು 1978-79 ರಲ್ಲಿ ಮನೆಯನ್ನು ಕಟ್ಟಿರುತ್ತಾರೆ. ಈಗ ನಾವು ಮನಯನ್ನು ಬಾಡಿಗೆಗೆ ಕೊಟ್ಟಿರುತ್ತೇವೆ. ಸುಮಾರು 15 ವರ್ಷದಿಂದ ಬಾಡಿಗಿಗೆ ಕೊಟ್ಟಿರುತ್ತೇವೆ. ದಾವೆ ಹಾಕುವ ಮೊದಲೇ ಬಾಡಿಗೆಗೆ ಕೊಟ್ಟಿರುತ್ತೇವೆ. ಸದರಿ ಸ್ವತ್ತಿನಲ್ಲಿ ಭೀಮರಾಯ ಮತ್ತು ಚಂದ್ರಕಲಾ ಬಾಡಿಗೆಗೆ ಇರುತ್ತಾರೆ. ಬಾಡಿಗೆ ವಸೂಲಿ ಮಾಡಲು ನಾನೇ ಹೋಗುತ್ತೇನೆ. 1 ನೇ ಪ್ರತಿವಾದಿಯು ದಾವಾ ಹಾಕುವ ಕಾಲಕ್ಕೆ ಭಾರತ ಚೌಕ ಅವರ ಮನೆಯಲ್ಲಿ ವಾಸ ಇದ್ದರು. ನಾವು ಅವರು ಒಂದೇ ವಿಳಾಸ ಹೊಂದಿದ್ದು ನಮ್ಮ ಭಾಗದ ಸ್ವತ್ತಿನಲ್ಲಿ ನಾವು ಮತ್ತು ಅವರ ಭಾಗದ ಸ್ವತ್ತಿನಲ್ಲಿ ಅವರೇ ವಾಸ ಇದ್ದಾರೆ ಎಂದು ಸೂಚಿಸಿದ್ದು ಸರಿ. ದಾವಾ ಸ್ವತ್ತನ್ನು ನನ್ನ ತಂದೆಯ ಹಾಗೂ ಪ್ರತಿವಾದಿಗಳು ಎಲ್ಲರೂ ಸೇರಿ ಖರಿದಿ ಮಾಡಿದ್ದರಿಂದ 2007 ರಲ್ಲಿ ನನ್ನ ತಾಯಿಯು ಶಹಾಬಾದ ಮುನಿಸಿಪಾಲಟಿಗೆ ಅರ್ಜಿ ಸಲ್ಲಿಸಿ ಎಲ್ಲರಿಗೂ ಸಮ ಹಿಸ್ಸೆ ಮಾಡಿ ಕೊಟ್ಟ ಪ್ರಕಾರ ನಾವು ನಮ್ಮ ನಮ್ಮ ಹಿಸ್ಸೆಯಲ್ಲಿ ಕಬ್ಜೆಯಲ್ಲಿ ಇದ್ದೇವೆ ಎಂದು ಸೂಚಿಸಿವುದು ಸರಿಯಲ್ಲ. ಆ ಪ್ರಕಾರ ಮುನಿಸಿಪಾಲಟಿಯವರು ನಮ್ಮ ನಮ್ಮ ಸ್ವತ್ತುಗಳಿಗೆ ಪ್ರತ್ಯೇಕ ನಂಬರ ಕೊಟ್ಟಿರುತ್ತಾರೆ ಎಂದು ಸೂಚಿಸವುದು ಸರಿಯಲ್ಲ. ಈಗ ದಾವಾ ಸ್ವತ್ತಿಗೆ ಹೆಚ್ಚಿಗೆ ಬೆಲೆ ಬಂದಿರುವುರಿಂದ ಅದನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವಾ ಹಾಕಿರುತ್ತೇನೆ ಅಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಚಾರ ಮೊದಲಿನಿಂದಲೂ ಗೊತ್ತಿರುತ್ತದೆ ಅಂದರೆ ಸರಿಯಲ್ಲ. ನಾನು ಅವರ ಅವರ ಹಿಸ್ಸೆಗೆ ಆದ ಮುಟೇಶನ ಆದೇಶವನ್ನು ಕಂದಾಯ ಪ್ರಾಧಿಕಾರದಲ್ಲಿ ಪ್ರಶ್ನೆ ಮಾಡಿಲ್ಲ.

ಮರು ವಿಚಾರಣೆಃ ಏನು ಇರುವುದಿಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.